ಪೊಲೀಸ್ ಅಧೀಕ್ಷಕರ ಕಛೇರಿ
ದಕ್ಷಿಣ ಕನ್ನಡ ಜಿಲ್ಲೆ,
ಮಂಗಳೂರು
ದಿನಾಂಕ : 18.11.2020

ಕಛೇರಿ : 0824-2220508
ಮೊಬೈಲ್: 9480805300
ಇ-ಮೈಲ್ :
dcmaq@ksp.gov.in

# ಪತ್ರಿಕಾ ಪ್ರಕಟಣೆ

## ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವ್ಯಾಪ್ತಿಯಲ್ಲಿ ತುರ್ತು ಸ್ಪಂದನ ಸಹಾಯ ವ್ಯವಸ್ಥೆ 112 ಗೆ ಚಾಲನೆ ನೀಡಿರುವ ಕುರಿತು

ದಿನಾಂಕ 14-11-2020 ರಿಂದ ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವ್ಯಾಪ್ತಿಯಲ್ಲಿ ತುರ್ತು ಸ್ಪಂದನ ಸಹಾಯ ವ್ಯವಸ್ಥೆ 112 ಪ್ರಾಯೋಗಿಕವಾಗಿ ಕಾರ್ಯಾರಂಭಗೊಂಡಿದೆ. ಈಗಾಗಲೇ ಈ ವ್ಯವಸ್ಥೆಗೆ ಸಾರ್ವಜನಿಕರಿಂದ ಉತ್ತಮ ಸ್ಪಂದನೆ ದೊರೆತಿದೆ.

ಸಾರ್ವಜನಿಕರು ಅಪಘಾತ, ದರೋಡೆ, ಕಳ್ಳತನ, ಮಹಿಳಾ, ಮಕ್ಕಳ, ಹಿರಿಯ ನಾಗರಿಕರ ಹಾಗೂ ಇನ್ನಿತರ ಎಲ್ಲಾ ರೀತಿಯ ತುರ್ತು ಸಂದರ್ಭಗಳಲ್ಲಿ ತುರ್ತು ಸ್ಪಂದನ ಸಹಾಯ ವ್ಯವಸ್ಥೆ 112 ಗೆ ಕರೆ ಮಾಡಬಹುದು.

ತುರ್ತು ಸ್ಪಂದನ ಸಹಾಯ ವ್ಯವಸ್ಥೆ 112 ಸೇವೆಗಾಗಿ ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವಾಪ್ತಿಯಲ್ಲಿ 10 ಹೊಯ್ಸಳ ವಾಹನಗಳು 24X7 ಕಾರ್ಯಾನಿರ್ವಹಿಸುತ್ತಿವೆ.

ಸಾರ್ವಜನಿಕರಿಗೆ ಪೊಲೀಸ್ ಹಾಗೂ ಇನ್ನಿತರ ತುರ್ತು ಸೇವೆಗಳಿಗಾಗಿ ಅಗತ್ಯವಿದ್ದಾಗ 112 ಗೆ ಕರೆಮಾಡಿ 8 ನ್ನು ಒತ್ತಿದಾಗ ಬೆಂಗಳೂರಿನ ಎಂ.ಜಿ. ರಸ್ತೆಯಲ್ಲಿರುವ ಎಡಿಜಿಪಿ ಸಿ.ಎಲ್ & ಎಂ. ಕಛೇರಿಯ PSAP (Public Safety Answering Point) ನಲ್ಲಿ ಕಾಲ್ ಟೇಕರ್‌ಗಳು ಸ್ಪಂದಿಸುತ್ತಾರೆ, ಬಳಿಕ ಕರೆಮಾಡಿದವರ ಹೆಸರು, ತುರ್ತು ನೆರವು ಬೇಕಾಗಿರುವ ವಿಳಾಸ, ಯಾವ ರೀತಿಯ ನೆರವು ಬೇಕೆಂಬುದನ್ನು ತಿಳಿದು ಅಥವಾ ವಿಳಾಸ ತಿಳಿಸದಿದ್ದರೆ ಡಿಜಿಟಲ್ ನಕ್ಷೆಯ ಮೂಲಕ ನಿಮ್ಮ ಸ್ಥಳವನ್ನು ಗುರುತಿಸಿ ಅತ್ಯಂತ ಶೀಘ್ರವಾಗಿ ಸ್ಪಂದಿಸಿ, ಸಂಬಂಧಿಸಿದ ಜಿಲ್ಲೆಯ DCC (District Co-ordination Centre)ಗೆ ರವಾನಿಸುತ್ತಾರೆ, ತದನಂತರ DCC ಯಲ್ಲಿ ಘಟನಾ ಸ್ಥಳದ ಮಾಹಿತಿಯನ್ನು ಪರಿಶೀಲಿಸಿ ಘಟನಾ ಸ್ಥಳಕ್ಕೆ ಹತ್ತಿರವಿರುವ ಹೊಯ್ಸಳ ವಾಹನವನ್ನು ಕಳುಹಿಸಲಾಗುವುದು. ಹೊಯ್ಸಳ ವಾಹನವು GPS ತಂತ್ರಜ್ಞಾನದ ಮೂಲಕ ಘಟನಾ ಸ್ಥಳಕ್ಕೆ ಭೇಟಿ ನೀಡಿ ಘಟನಾ ಸ್ಥಳದ ಪರಿಸ್ಥಿತಿಯನ್ನು ಬಗೆಹರಿಸುತ್ತಾರೆ. ಪ್ರತಿ ಹಂತದಲ್ಲೂ ಘಟನೆಯ ಬಗ್ಗೆ ಕಾರ್ಯವೈಖರಿಯನ್ನು, ಘಟನಾ ಪರಿಸ್ಥಿತಿ ಬಗೆ ಹರಿಯುವವರೆಗೂ ಬೆಂಗಳೂರಿನ PSAP ನಲ್ಲಿ ಗಮನಿಸುತ್ತಿರುತ್ತಾರೆ ಹಾಗೂ ಪರಿಸ್ಥಿತಿ ಬಗೆ ಹರಿದ ನಂತರ ಕರೆ ಮಾಡಿದ ವ್ಯಕ್ತಿಯಿಂದ ಪ್ರತಿಕ್ರಿಯೆಯನ್ನು ಪಡೆದುಕೊಳ್ಳುತ್ತಾರೆ. ಸಾರ್ವಜನಿಕರಿಗೆ ತುರ್ತು ಸ್ಪಂದನ ಸಹಾಯ ವ್ಯವಸ್ಥೆ 112 ಬಗ್ಗೆ ಅರಿವು ಮೂಡುವವರೆಗೆ 100 ಕ್ಕೆ ಕರೆಮಾಡಿದರೂ 112 ನಿಯಂತ್ರಣ ಕೊಠಡಿಗೆ ಹೋಗುತ್ತದೆ.

ಸಾರ್ವಜನಿಕರು 112 ಪ್ಯಾನಿಕ್ ಅಲರ್ಟ್‌ಗಾಗಿ ಸಾಮಾನ್ಯ ಫೋನಿನಲ್ಲಿ '5' ಅಥವಾ '9' ಸಂಖ್ಯೆಯನ್ನು ಲಾಂಗ್ ಪ್ರೆಸ್ ಮಾಡಿದರೆ 112 ಗೆ ಕನೆಕ್ಟ್ ಆಗುತ್ತದೆ. ಹಾಗೂ ಸ್ಮಾರ್ಟ್ ಫೋನಿನಲ್ಲಿ ಪವರ್ ಬಟನನ್ನು 3 ಬಾರಿ ವೇಗವಾಗಿ ಪ್ರೆಸ್ ಮಾಡಿದರೆ 112 ಗೆ ಕನೆಕ್ಟ್ ಆಗುತ್ತದೆ.

ಸಾರ್ವಜನಿಕರು www.ka.ners.in ಈ ಜಾಲತಾಣದ ಮೂಲಕ, ಇ-ಮೇಲ್ 112ktk@ksp.gov.in ಹಾಗೂ "112 India" ಮೊಬೈಲ್ ಆ್ಯಪ್ ಮೂಲಕವೂ ತಮ್ಮ ವಿನಂತಿಗಳನ್ನು ಕಳುಹಿಸಬಹುದು.

ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವ್ಯಾಪ್ತಿಯ ಸಾರ್ವಜನಿಕರು ಅಗತ್ಯ ಸಂದರ್ಭಗಳಲ್ಲಿ ಈ ಸೇವೆಯ ಸದುಪಯೋಗ ಪಡೆದುಕೊಳ್ಳಬೇಕಾಗಿ ಮನವಿ.

ಪೊಲೀಸ್ ಅಧೀಕ್ಷಕರು
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.